“ಎಷ್ಟು ಎಬ್ಬಿಸಿದ್ರೂ ಏಳಲಿಲ್ಲ. ಮೂರ್ಛೆ ಹೋಗಿದ್ರ?”

“ನಾನು ನೀವು ಮೂರ್ಛೆ ಹೋಗ್ಬೇಕು ಅಷ್ಟೆ. ಒಳಗೆ ಹೋಗಿ ನೋಡಿ. ಹೇಗೆ ಹಾರಾಡ್ತಿದ್ದಾರೆ ಅಂತ. ನೆನ್ನೆ ರಾತ್ರಿ ತುಂಬಾಹೊತ್ತು ನಿದ್ದೆ ಬರ್ಲಿಲ್ವಂತೆ. ಔಷಧಿ ಡಬ್ಬಿಯಿಂದ ಯಾವ್ದೋ ಎರಡು ಮಾತ್ರೆ ನುಂಗಿದ್ರಂತೆ. ಎಲ್ಲೋ ನಿದ್ದೆ ಮಾತ್ರೆ ನುಂಗಿಬರ್ೇಕು. ಎಚ್ಚರವಿಲ್ಲದ ನಿದ್ದೆ ಬಂದಿದೆ. ನೀವು ಆ ಡಬ್ಬದಲ್ಲಿ ನಿದ್ದೆ ಮಾತ್ರೆ ಇಟ್ಟಿದ್ರಾ?”

“ಹಿಂದೊಮ್ಮೆ ಹಲ್ಲು ನೋವು ಬಂದಾಗ ತುಂಬಾ ಬಾಧೆ ಆಗಿ ಆ ಮಾತ್ರೆ ತಂದಿಟ್ಟಿದ್ದೆ.” ವಾಣಿ ಒಪ್ಪಿಕೊಂಡಳು.

“ಇನ್ಮೇಲೆ ಅದೆಲ್ಲ ಅವರ ಕೈಗೆ ಸಿಗದಂತೆ ಇಡಿ. ಇನ್ನೇನಾದ್ರೂ ಅನಾಹುತ ಮಾಡಿಕೊಂಡಾರು.”

“ಇನ್ನು ನಮ್ಮ ತಾಯಿಯ ಜೀವಕ್ಕೇನೂ ಅಪಾಯವಿಲ್ಲ ತಾನೇ?” ಹರಿ ಖಾತ್ರಿ ಪಡಿಸಿಕೊಳ್ಳಲು ಕೇಳಿದ.

“ಅವರು ನೂರಿಪ್ಪತ್ತು ವರ್ಷ ಬದುಕಿರ್ತಾರೆ. ಅವರ ಆರೋಗ್ಯ ಅಷ್ಟು ಚೆನ್ನಾಗಿದೆ,” ಎಂದು ಹೇಳಿ ಡಾಕ್ಟರು ಅವರ ರೌಂಡ್ಸ್‌ಗೆ ಹೋದರು.

“ರೀ, ಅತ್ತೆಗೆ ನೂರಿಪ್ಪತ್ತು ಆಗೋಹೊತ್ಗೆ ನನ್ನ ವಯಸ್ಸು ಎಷ್ಟಾಗತ್ತೆ?”

“ನೀನು ಅದರ ಲೆಕ್ಕ ಹಾಕ್ತಿರು. ನನ್ನ ಯೋಚನೆ ನನಗೆ. ರಮೇಶ ವಾಗ್ದೇವಿ ಈ ವೇಳೆಗೆ ವಿಮಾನ ಏರಿರ್ತಾರೆ. ಅವರು ಬಂದಿಳಿದ್ರೆ ನಾನು ಏನು ಬದಲು ಹೇಳಲಿ?”

“ನಾವು ಮನೆ ತಲಪೋ ಹೊತ್ಗೆ ನಮ್ಮ ನೆಂಟ್ರುಗಳೆಲ್ಲಾ ನೆರೆದಿರ್ತಾರೆ. ಅವರಿಗೇನು ಹೇಳಲಿ?” ವಾಣಿಯ ಮರುನುಡಿ.

“ಎಲ್ಲಿ ಆ ಮುಠ್ಠಾಳ ಅಪ್ಪಣ್ಣ? ಎಲ್ಲಾ ಆದದ್ದು ಅವ್ನಿಂದ.” ದಂಪತಿ ಆಸ್ಪತ್ರೆಯಲ್ಲೆಲ್ಲಾ ಹುಡುಕಿದರು. ಅಪ್ಪಣ್ಣ ಮಾಯವಾಗಿದ್ದ!

ಎಮರ್ಜೆನ್ಸಿ ರೂಮಿನಿಂದ ಅತ್ತೆಯ ಧ್ವನಿ ಕೇಳಿಸಿತು.

“ಯಾವೊಳೇ ಅವ್ಳು? ನನ್ನನ್ನು ಆಸ್ಪತ್ರೆಗೆ ಸೇರ್ಸಿದ್ದು?”

## ಕುಮುದಾ ಪುರುಷೋತ್ತಮ್

ಹುಟ್ಟೂರು ತುಮಕೂರು. ಸ್ನಾತಕೋತ್ತರ ಪದವೀಧರೆ. ಮದುವೆಯ ಬಳಿಕ ಪಶ್ಚಿಮ ಬಂಗಾಲದ ಖಡ್ಗಪುರ ಹಾಗೂ ಚೆನ್ನೈಯಲ್ಲಿ ವಾಸ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇನ್ನೂರಕ್ಕೂ ಮೇಲ್ಪಟ್ಟು ಹಾಸ್ಯ ಲೇಖನಗಳು ಮತ್ತು ಸಣ್ಣಕತೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂರು ಕಥಾ ಸಂಗ್ರಹ, ಮೂರು ಹಾಸ್ಯ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಆಕಾಶವಾಣಿಯಲ್ಲಿ ನಾಟಕಗಳು, ಗೀತ ರೂಪಕಗಳು ಪ್ರಸಾರಗೊಂಡಿವೆ.